



# ಶಾರೂಕ್- ದೀಪಿಕಾ ಜೋಡಿ

ಶಾರೂಕ್ ಹಲವು ಸಲ ಬಿಚ್ಚು ಮನಸ್ಸಿನಿಂದ ಮಾತನಾಡುವುದಿದೆ. ಹಾಗೆ ಮಾತನಾಡಿದಾಗಲೆಲ್ಲ ಇನ್ನೊಬ್ಬರಿಗೆ ನೋವಾಗುವ ಬಗ್ಗೆ ಆತ ಯೋಚಿಸುವುದಿಲ್ಲ. ಆತನ ಹೊಸ ಸಿನಿಮಾದಲ್ಲಿ  ನಾಯಕಿಯಾಗಿ ನಟಿಸುತ್ತಿರುವವಳು ಅನೂಷ್ಕಾ ಶರ್ಮಾ. ಮೊನ್ನೆ ಪತ್ರಿಕೆಯೊಂದರ ಜತೆಗೆ ಮಾತನಾಡುತ್ತಿದ್ದ ಶಾರೂಕ್, 'ಈ ಚಿತ್ರದಲ್ಲಿ ನಿಜಕ್ಕೂ ನಾಯಕಿ ಆಗಬೇಕಿದ್ದಾಕೆ ದೀಪಿಕಾ. ಆಕೆಯ ಕಾಲ್‌ಷೀಟ್‌ಗಾಗಿ ನಾವು ಸಾಕಷ್ಟು ಕಾದೆವು. ಆದರೆ ಪದ್ಮಾವತಿ ಚಿತ್ರದ ಶೂಟಿಂಗ್ ಮುಂದಕ್ಕೆ ಹೋಗುತ್ತಲೇ ಇದ್ದುದರಿಂದ ಆಕೆಯ ದಿನಾಂಕಗಳು ಸಿಗಲಿಲ್ಲ. ಬೇರೆ ವಿಧಿಯಿಲ್ಲದೆ ಎರಡನೇ ಆಯ್ಕೆಯಾಗಿ ಅನೂಷ್ಕಾಳಿಗೆ ಅವಕಾಶ ಸಿಕ್ಕಿತು' ಎಂದಿದ್ದಾನೆ. ಈ ಹೇಳಿಕೆಯಿಂದ ಅನೂಷ್ಕಾಗೆ ಆಗಿರುವ ಸಂಕಟ ಹೇಳತೀರದಂತೆ.

ಶಾರೂಕ್– ದೀಪಿಕಾ ಜೋಡಿ ಈವರೆಗೆ ಒಟ್ಟಾಗಿ ನಟಿಸಿದ್ದು ಕೇವಲ ಮೂರೇ ಚಿತ್ರಗಳಲ್ಲಿ. ಈ ಜೋಡಿಯ ಹೊಸ ಚಿತ್ರಕ್ಕೆ ಪ್ರೇಕ್ಷಕರು ಕಾತುರದಿಂದ ಕಾದಿದ್ದಾರೆ ಎನ್ನುವುದು ಸುಳ್ಳಲ್ಲ. ದೀಪಿಕಾಳ ಅದ್ಭುತ ಅಭಿನಯ ಇರುವ 'ಪದ್ಮಾವತಿ' ಚಿತ್ರ ಡಿಸೆಂಬರ್ 1ರಂದು ತೆರೆ ಕಾಣಲಿದೆ. ಈ ಸಂಭ್ರಮ ಹಂಚಿಕೊಳ್ಳಲು ದೀಪಿಕಾ ಇತ್ತೀಚೆಗೆ ವೊರ್ಲಿಯ ತನ್ನ ಮನೆಯಲ್ಲಿ ಭರ್ಜರಿ ಪಾರ್ಟಿ ಇಟ್ಟುಕೊಂಡಿದ್ದಳು. ಶಾರೂಕ್ ಮತ್ತು ರಣವೀರ್ ಇಬ್ಬರೂ ಹಾಜರಿದ್ದರು. ಶೀಘ್ರವೇ ಶಾರೂಕ್ ಜತೆ ಹೊಸ ಚಿತ್ರದಲ್ಲಿ ಅಭಿನಯಿಸುವುದಾಗಿ ದೀಪಿಕಾ ಆ ಪಾರ್ಟಿಯಲ್ಲೇ ಪ್ರಕಟಿಸಿದಳಂತೆ.

# ಪರಿಣೀತಿ ಖುಷ್

'ಗೋಲ್‌ಮಾಲ್ ಅಗೈನ್' ಚಿತ್ರದ ಗಳಿಕೆಯ ನಾಗಾಲೋಟ ಕಂಡು ಬಾಲಿವುಡ್ ಬೆರಗಾಗಿದೆ. ಈಗಾಗಲೆ 200 ಕೋಟಿ ರೂಪಾಯಿ ದಾಟಿರುವ ಕಲೆಕ್ಷನ್, ಚಿತ್ರದ ನಿರ್ದೇಶಕ ರೋಹಿತ್ ಶೆಟ್ಟಿಯ ತಾರಾಮೌಲ್ಯಕ್ಕೆ ಇನ್ನಷ್ಟು ಮೆರುಗು ನೀಡಿದೆ. ಆದರೆ ಚಿತ್ರದ ಯಶಸ್ಸಿನಿಂದ ನಿಜಕ್ಕೂ ಹೆಚ್ಚು ಖುಷಿ ಪಟ್ಟವಳು ಪರಿಣೀತಿ ಚೋಪ್ರಾ. ಅಜಯ್ ದೇವಗನ್ ಸಹಿತ ಐವರು ಹೀರೋಗಳು ಪ್ರಮುಖ ಪಾತ್ರ ವಹಿಸಿರುವ ಚಿತ್ರದಲ್ಲಿ ಪರಿಣೀತಿ ಮತ್ತು ಟಬೂ ಇಬ್ಬರೂ ಅತ್ಯಧಿಕ ಸ್ಕೋಪ್ ಇರುವ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಅದರಲ್ಲೂ ಅಜಯ್‌ಗೆ ನಾಯಕಿಯಾಗಿ ಪರಿಣೀತಿ ಸಖತ್ ಮಿಂಚಿದ್ದಾಳೆ.

ಈ ಚಿತ್ರದ ಯಶಸ್ಸಿನ ಪರಿಣಾಮವೋ ಎನ್ನುವಂತೆ ಪರಿಣೀತಿ ತನ್ನ ಸಂಭಾವನೆಯನ್ನು ಏಕ್‌ದಂ ಏರಿಸಿಕೊಂಡಿದ್ದಾಳಂತೆ. ಈಕೆಯ ಏರಿದ ಸಂಭಾವನೆ ಕಂಡು ಚಿತ್ರ ನಿರ್ಮಾಪಕರು ತಕ್ಷಣಕ್ಕೆ ಹೊಸ ಚಿತ್ರಕ್ಕೆ ಸಹಿ ಹಾಕಲು ಮುಂದೆ ಬರದಿದ್ದರೂ, ಜಾಹೀರಾತು ಕಂಪೆನಿಗಳು ಇನ್ನಷ್ಟು ಅವಕಾಶಗಳನ್ನು ನೀಡಿವೆ. ಈ ಮಧ್ಯೆ ಈಕೆ ಈಗಾಗಲೆ ಸಹಿ ಹಾಕಿರುವ 'ಟಕಡುಂ' ಮತ್ತು 'ಸರ್ಕಸ್' ಚಿತ್ರಗಳ ನಿರ್ಮಾಪಕರ ನಿರೀಕ್ಷೆಗಳೂ ಮುಗಿಲಿಗೇರಿವೆ. ಪರಿಣೀತಿಯ ಬೇಡಿಕೆ ಹೆಚ್ಚಿರುವಾಗಲೇ ತಮ್ಮ ಚಿತ್ರಗಳನ್ನು ಬೇಗ ಮುಗಿಸಲು ಇಬ್ಬರೂ  ನಿರ್ಮಾಪಕರು ಪೈಪೋಟಿಗೆ ಇಳಿದಿದ್ದಾರಂತೆ.

■ ಬಿಂದು

